# ಕೊರೊನಾ ಕಲೆ

**ಸಂಘರ್ಷದ** ಸಂದರ್ಭ ಭಯ, ಆತಂಕ, ಸೂತಕದ ಸುದ್ದಿಗಳಿಗಷ್ಟೇ ಕಾರಣವಾಗುವುದಿಲ್ಲ; ಸೃಜನಶೀಲ ಅಭಿವ್ಯಕ್ತಿಗೂ ವೇದಿಕೆಯಾಗುತ್ತದೆ. ವಿಶ್ವವನ್ನೇ ಬೆಚ್ಚಿಬೀಳಿಸಿರುವ ಕೊರೊನಾ ರೋಗಾಣುಗಳ ಪ್ರಸಕ್ತ ಸಂದರ್ಭವೂ ಕಲಾವಿದರ ಸೃಜನಶೀಲ ಅಭಿವ್ಯಕ್ತಿಯಲ್ಲಿ ಹಲವು ರೂಪಗಳಲ್ಲಿ ಚಿತ್ರಣಗೊಳ್ಳುತ್ತಿದೆ. ಇಲ್ಲಿರುವ ಕೆಲವು ಕಲಾಕೃತಿಗಳು ಕೊರೊನಾದ ಭೀಕರತೆಯನ್ನು ಹಲವು ರೂಪಗಳಲ್ಲಿ ಕಟ್ಟಿಕೊಡುವಂತಿವೆ. ಸಾಮಾಜಿಕ ಸಂದರ್ಭ, ನಂಬಿಕೆ, ದೈವ, ತಂತ್ರಜ್ಞಾನ – ಹೀಗೆ ಹಲವು ಸಂಗತಿಗಳು ಬೆರೆತುಕೊಂಡ ಈ ಚಿತ್ರಗಳು ಈ ಹೊತ್ತಿನ ದಾಖಲೆಗಳಂತೆಯೂ ಗತ–ವರ್ತಮಾನವನ್ನು ಬೆಸೆಯುವ ಸಾಧ್ಯತೆಗಳಂತೆಯೂ ಕಾಣಿಸುತ್ತವೆ.



ಬೆಂಗಳೂರು ಮಹಾನಗರ ಪಾಲಿಕೆ ಕೇಂದ್ರ ಕಚೇರಿಯ ಆವರಣದಲ್ಲಿ ರಂಗೋಲಿ ಕಲಾವಿದ ಅಕ್ಷಯ್ ಜಾಲಿಹಾಳ್ ರಂಗೋಲಿ ಚಿತ್ರದ ಮೂಲಕ 'ಕೋವಿಡ್ 19' ವೈರಸ್ ಬಗ್ಗೆ ಜನಜಾಗೃತಿ ಮೂಡಿಸುವ ಪ್ರಯತ್ನ ನಡೆಸಿರುವುದು.

ಚಿತ್ರ: ಇರ್ಷಾದ್ ಮಹಮ್ಮದ್







ವಜ್ರದಂತೆ ಕಂಗೊಳಿಸುವ ಈ ಗಾಜಿನ ಕಲಾಕೃತಿಯ ಹೆಸರು 'ಕೊರೊನಾ ವೈರಸ್ – ಕೋವಿಡ್ 19'. ಶೀರ್ಷಿಕೆ ಕೇಳಿದ ಮೇಲೆ ವಿವರಗಳನ್ನು ಹೇಳುವ ಅಗತ್ಯವಿಲ್ಲವಷ್ಟೇ. ಈ ಕಲಾಕೃತಿಯ ಜನಕ ಬ್ರಿಟಿಷ್ ಕಲಾವಿದ ಲ್ಯೂಕ್ ಜೆರ್ರಮ್.

ಮುಂಬಯಿಯ ಜುಹೂ ಕಡಲ ಕಿನಾರೆಯಲ್ಲಿ ಮರಳು ಕಲಾವಿದೆ ಲಕ್ಷ್ಮಿ ಗೌಡ್ ಅವರ ಕೈಗಳಲ್ಲಿ ಮೂಡಿರುವ ಕೊರೊನಾ ಮಾರಿಯನ್ನು ತಡೆಗಟ್ಟುವ ಬಿಂಬಗಳು.